**CC.No. 1203/2025 - - PW -1**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:15-06-2026**

**ಮುಂದುವರೆದ ಮುಖ್ಯ ವಿಚಾರಣೆಃ ದೂರುದಾರರ ಪರ ಶ್ರೀ ಎಸ್ ಪಿ ವಕೀಲರಿಂದ**

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

1. ದಿನಾಂಕ ಃ 29.08.2022 ರ ಮನೆ ಭೋಗ್ಯದ ಕರಾರು ಪತ್ರವನ್ನು ನಿ.ಪಿ.-6 ಎಂದು ಗುರುತಿಸಲಾಯಿತು.
2. ದಿಃ 29.08.2022 ರ ಬ್ಯಾಂಕ್ ಪಾಸ್ ಪುಸ್ತಕವನ್ನು ನಿ.ಪಿ.-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಸ್ ವೈ ಪಿ ವಕೀಲರಿಂದ**

ನಿ ಪಿ 6 ಭೋಗ್ಯ ಕರಾರು ಪತ್ರ ನನ್ನ ಮತ್ತು ಹೆಚ್ ಎಂ ದಿಕ್ಷೀತ ರವರ ನಡುವೆ ಆದ ಕರಾರು ಪತ್ರ ಎಂದರೆ ಸರಿ. ನಿ ಪಿ 6 ರಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಸದರಿ ವ್ಯವಹಾರವನ್ನು ಆರೋಪಿ, ಅವರ ಮಗ ಮತ್ತು ಅವರ ಗಂಡ ಒಟ್ಟಾಗಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ಅವಧಿ ಮುಗಿದ ನಂತರ ದಿಕ್ಷೀತ ರವರು ಹಣ ಹಿಂದಿರುಗಿಸದ ಸಮಯದಲ್ಲಿ ಯಾವ ಕ್ರಮವನ್ನು ಕೈಗೊಳ್ಳಬೇಕು ಎಂದು ನಮೂದು ಮಾಡಿರುವುದಿಲ್ಲ. ನಿ ಪಿ 6 ರ 14 ನೇ ಷರತ್ತು ಪ್ರಕಾರ ಮನೆ ಖಾಲಿ ಮಾಡುವ ಸಲುವಾಗಿ ನಾನು ಲಿಖಿತವಾಗಿ ನೋಟೀಸ ನೀಡಿಲ್ಲ ಆದರೆ ಮೌಖಿಕವಾಗಿ ತಿಳಿಸಿರುತ್ತೇನೆ. ಭೋಗ್ಯ ಹಣವನ್ನು ಕರಾರು ಮುಗಿದ ನಂತರ ಮಾಲೀಕರು ನೀಡದ ಪಕ್ಷದಲ್ಲಿ ಹಣ ನೀಡುವವರೆಗೂ ಭೋಗ್ಯ ದ ಕರಾರು ಮುಂದುವರೆಯುತ್ತದೆ ಮತ್ತು ನಾನೇ ಮನೆಯಲ್ಲಿ ಮುಂದುವರೆಸತಕ್ಕದ್ದು ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಮನೆಯ ಬೀಗ ನನ್ನ ಕೈಯಲ್ಲಿ ಇರುವುದಾಗಿ ನುಡಿಯುತ್ತಾರೆ.

ಒಂದು ವೇಳೆ ಉಭಯಪಕ್ಷದವರು ಷರತ್ತು ಉಲ್ಲಂಘಿಸಿದ್ದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಬಗ್ಗೆಹರಿಸಿಕೊಳ್ಳುವಂತೆ 17 ನೇ ಷರತ್ತು ಇರುತ್ತದೆ ಎಂದರೆ ಸರಿ. ಆ ಪ್ರಕಾರ ದಿಕ್ಷೀತ್ ರವರ ವಿರುದ್ದ ಯಾವ ದಾವೆ ಹೂಡಿರುವುದಿಲ್ಲ. ಅವರ ವಿರುದ್ದ ದಾವೆ ಹೂಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಹಣ ಕೇಳಲು ಹೋದಾಗ ಅವರು ನನ್ನ ಮೇಲೆ ದಬ್ಬಳಿಕೆ ಮಾಡಿದ್ದು ನಾನು

ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಅವರು ಯಾವುದೇ ಹಲ್ಲೆ ಅಥವಾ ದಬ್ಬಳಿಕೆ ಮಾಡಿದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಿವಿಲ್ ದಾವೆ ಹೂಡಲು ಸಾಕಷ್ಟು ಹಣ ಖರ್ಚು ಆಗುತ್ತದೆ ಎಂಬ ಉದ್ದೇಶದಿಂದ ಆರೋಪಿಯನ್ನು ಠಾಣೆಗೆ ಕರೆಸಿ ಅವರನ್ನು ಬೆದರಿಸಿ ದಬ್ಬಳಿಕೆಯಿಂದ ಪೊಲೀಸರ ಮೂಲಕ ನಾನು ನಿ ಪಿ 1 ಚೆಕ್ ನ್ನು ಪಡೆದು ಈ ಕೇಸನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ನಿ ಪಿ 6 ಕರಾರು ಪತ್ರದಂತೆ ಆರೋಪಿ ನನಗೆ ಯಾವುದೇ ಹಣ ನೀಡುವ ಬಾದ್ಯತೆ ಹೊಂದಿಲ್ಲ ಎಂದರೆ ಸರಿಯಲ್ಲ. ನಿ ಪಿ 7 ರಲ್ಲಿ ನಾನು ಆರೋಪಿಗೆ ಹಣ ಸಂದಾಯ ಮಾಡಿರುವ ಬಗ್ಗೆ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 29.08.2022 ರಂದು ನಾನು ಹಣ ಬ್ಯಾಂಕ್ ನಿಂದ ಪಡೆದುಕೊಂಡಿರುತ್ತೇನೆ ಹೊರತು ಆರೋಪಿಗೆ ಚೆಕ್ ಮೂಲಕ ಹಣ ಪಾವತಿ ಮಾಡಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**